2019 ಕ.ತೀ.ವ 1526

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಲ್. ನಾರಾಯಣ ಸ್ವಾಮಿ
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆರ್. ದೇವದಾಸ್

ದಿ ಹಿಂದುಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್, ಬೆಂಗಳೂರು –ವಿರುದ್ಧ–
ಶ್ರೀಮತಿ ಹೇಮಾವತಿ ಮತ್ತು ಇತರರು*

ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮದ 4ನೇ ಪ್ರಕರಣದ ಅಡಿಯಲ್ಲಿ, ರಿಟ್ ಅರ್ಜಿ ಸಂಖ್ಯೆ: 6383/2014, ದಿನಾಂಕ: 18/08/2016 ಮತ್ತು ಇತ್ಯಾದಿಯಲ್ಲಿ ಹೊರಡಿಸಿದ ಆದೇಶವನ್ನು ತಳ್ಳಿಹಾಕಲು ಕೋರಿ ಈ ರಿಟ್ ಅಪೀಲನ್ನು ಸಲ್ಲಿಸಲಾಗಿದೆ.

ಇದರಲ್ಲಿನ ಒಂದನೇ ಪ್ರತ್ಯರ್ಜಿದಾರಳು ರಿಟ್ ಅರ್ಜಿ ಸಂಖ್ಯೆ: 6383/2014ಲ್ಲಿ ಎರಡು ಅರ್ಜಿಗಳನ್ನು ಸಲ್ಲಿಸಿದ್ದು, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಮತ್ತು ಅಪೀಲು ಪ್ರಾಧಿಕಾರದ ಆದೇಶವನ್ನು ಆಕೆಯು ಪ್ರಶ್ನಿಸಿದ್ದರೆ, ರಿಟ್ ಅರ್ಜಿ ಸಂಖ್ಯೆ: 29850/ 2014ರಲ್ಲಿ, ಮೊದಲನೇ ಪ್ರತ್ಯರ್ಜಿದಾರಳು ಅಪೀಲುದಾರ–ನಿಯೋಜಕ ಸಂಸ್ಥೆಯು ಹೊರಡಿಸಿದ ವಜಾ ಆದೇಶವನ್ನು ಪ್ರಶ್ನಿಸಿದ್ದಾಳೆ. ಎರಡೂ ರಿಟ್ ಅರ್ಜಿಗಳಲ್ಲಿ ಹೊರಡಿಸಿದ ಆದೇಶಗಳು, ಒಂದನೇ ಪ್ರತ್ಯರ್ಜಿದಾರಳು ಜಾತಿ ಕ್ಲೇಮು ಮಾಡಿ ಉದ್ಭವಿಸಿದ್ದರಿಂದ, ಎರಡೂ ರಿಟ್ ಅಪೀಲುಗಳನ್ನು ಆಲಿಸಿ, ಈ ಸಾಮಾನ್ಯ ತೀರ್ಪಿನ ಮೂಲಕ ವಿಲೆ ಮಾಡಲಾಗಿದೆ.

ಅಪೀಲುದಾರ–ಕಂಪನಿಯಲ್ಲಿನ ಇಂಜಿನಿಯರ್ ಹುದ್ದೆಗೆ ಅರ್ಜಿದಾರಳು ನೇಮಕಾತಿ ಕೋರಿ ಅನುಸೂಚಿತ ಪಂಗಡ ವರ್ಗದಡಿಲ್ಲಿ ಬರುವ 'ಜೇನು ಕುರುಬ' ಸಮುದಾಯಕ್ಕೆ ಸೇರಿರುವುದಾಗಿ ಅರ್ಜಿ ಸಲ್ಲಿಸಿದ್ದಾಳೆ. ಆಕೆಯು 'ಜೇನು ಕುರುಬ' ಸಮುದಾಯಕ್ಕೆ

*ರಿಟ್ ಅರ್ಜಿ ಸಂಖ್ಯೆ: 3666/2016 (ಎಸ್–ಡಿಐಎಸ್) ಇದರೊಂದಿಗೆ ಇತರೆ, ದಿನಾಂಕ 3ನೇ ಜುಲೈ, 2019.

ಸೇರಿರದೆ ಹಿಂದುಳಿದ ವರ್ಗಕ್ಕೆ ಸೇರಿದ 'ಕುರುಬ ಗೌಡ' ಸಮುದಾಯಕ್ಕೆ ಸೇರಿರುವಳೆಂದು ಜಾತಿ ಪರಿಶೀಲನಾ ಸಮಿತಿಯ ದಿನಾಂಕ: 11.11.2009ರ ನಿರ್ಣಯದಿಂದ ಅಪೀಲುದಾರ–ಕಂಪನಿಯು ಆಕೆಯನ್ನು ಸೇವೆಯಿಂದ ವಜಾಗೊಳಿಸುವ ಕುರಿತು ಕಾರಣ ಕೇಳುವ ನೋಟೀಸನ್ನು ನೀಡಿ, ಆಕೆ ನೀಡಿದ ಉತ್ತರವನ್ನು ಪರಿಗಣಿಸಿದ ನಂತರ ಸುಳ್ಳು ಜಾತಿ ಪ್ರಮಾಣಪತ್ರ ನೀಡಿರುವುದನ್ನು ಮನಗಂಡು ಸೇವೆಯಿಂದ ವಜಾಗೊಳಿಸಿದೆ. ಇದರಿಂದ ಬಾಧಿತಳಾಗಿ ಆಕೆಯು ಅಪೀಲು ಪ್ರಾಧಿಕಾರವಾದ ಅನುಸೂಚಿತ ಪಂಗಡ ಕಲ್ಯಾಣ ಇಲಾಖೆಗೆ ಅಪೀಲು ಹೂಡಿದ್ದಾಳೆ. ಜೊತೆಗೆ ಅಪೀಲುದಾರ ಕಂಪನಿಯ ಅಪೀಲು ಪ್ರಾಧಿಕಾರದ ಮುಂದೆಯು ಸಹ ಅರ್ಜಿ ಸಲ್ಲಿಸಿದ್ದಾಳೆ. ಸದರಿ ಅರ್ಜಿ ಮತ್ತು ಅಪೀಲುಗಳು ತಿರಸ್ಕೃತವಾಗಿದ್ದು, ಇದರ ವಿರುದ್ಧ ಆಕೆಯು ಮಾನ್ಯ ಏಕಪೀಠ ನ್ಯಾಯಾಧೀಶರ ಮುಂದೆ ಎರಡು ರಿಟ್ ಅರ್ಜಿಗಳನ್ನು ಸಲ್ಲಿಸಿದ್ದಾಳೆ. ಸದರಿ ರಿಟ್ ಅರ್ಜಿಗಳಿಗೆ ಅನುಮತಿ ನೀಡಿ ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಆದೇಶಗಳನ್ನು ಪ್ರಶ್ನಿಸಿ ಅಪೀಲುದಾರ–ಕಂಪನಿಯು ಈ ನ್ಯಾಯಾಲಯದ ಮುಂದೆ ಬಂದಿದೆ.

ಪ್ರತ್ಯರ್ಜಿದಾರಳ ಪರ ವಕೀಲರು ಆಕೆಯು ದುರುದ್ದೇಶದಿಂದ ಅರ್ಜಿ ಸಲ್ಲಿಸಿಲ್ಲವೆಂದು, ತಾನು ಜೇನುಕುರುಬ ಸಮುದಾಯಕ್ಕೆ ಸೇರಿರುವುದಾಗಿ ನಂಬಿ ಅರ್ಜಿ ಸಲ್ಲಿಸಿರುವಳೆಂದು, ಆಕೆಯ ರಕ್ಷಣೆಗೆ ರಾಜ್ಯ ಸರ್ಕಾರಗಳು ಮತ್ತು ಭಾರತ ಸರ್ಕಾರವು ಹೊರಡಿಸಿದ ವಿವಿಧ ಆದೇಶಗಳನ್ನು/ಸುತ್ತೋಲೆಗಳನ್ನು ಉಲ್ಲೇಖಿಸಿದ್ದಾರೆ.

ಅಪೀಲುದಾರರ ಪರ ವಕೀಲರು ಸುಳ್ಳು ಜಾತಿ ಪ್ರಮಾಣಪತ್ರದ ಆಧಾರದ ಮೇಲೆ ನೇಮಕಾತಿಗಳನ್ನು ಪಡೆಯುವ ವಿಷಯಗಳಲ್ಲಿ ಮತ್ತು ಅದರ ಪರಿಣಾಮಗಳನ್ನು ಕುರಿತು ಸರ್ವೋಚ್ಚ ನ್ಯಾಯಾಲಯದ ವಿವಿಧ ತೀರ್ಪುಗಳನ್ನು ಉಲ್ಲೇಖಿಸಿ, ಅಪೀಲುದಾರರು ಹೊರಡಿಸಿದ ಆದೇಶವು ಸರಿಯಾದುದಾಗಿದೆ ಎಂದು ವಾದಿಸಿದ್ದಾರೆ.

ಈರ್ವರೂ ಪಕ್ಷಕಾರ ವಾದಗಳನ್ನು ಈ ನ್ಯಾಯಾಲಯವು ಆಲಿಸಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಹಿಂದಿನ ತೀರ್ಪುಗಳನ್ನು ಪರಿಗಣಿಸಿ, ರಿಟ್ ಅಪೀಲುಗಳಿಗೆ ಅನುಮತಿ ನೀಡಿದೆ ಮತ್ತು ರಿಟ್ ಅರ್ಜಿ ಸಂಖ್ಯೆ: 29850/2014ರಲ್ಲಿ ಮತ್ತು ರಿಟ್ ಅರ್ಜಿ

**ಸಂಖ್ಯೆ: 6383/2014ರಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ದಿನಾಂಕ: 06.09.2016ರ ಮತ್ತು ದಿನಾಂಕ: 18.08.2016ರ ಪ್ರಶ್ನಿತ ಆದೇಶಗಳನ್ನು ತಳ್ಳಿಹಾಕಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. ಎಐಆರ್ 2017 ಎಸ್‌ಸಿ 3271*
*ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು,*
*ಎಫ್‌ಸಿಐ ಮತ್ತು ಇತರರು –ವಿರುದ್ಧ–*
*ಜಗದೀಶ್ ಬಲರಾಮ್ ಬಹಿರಾ ಮತ್ತು ಇತರರು (ಉಲ್ಲೇ) 4*

*2. ಎಐಆರ್ 2001 ಎಸ್‌ಸಿ 393*
*ಮಹಾರಾಷ್ಟ್ರ ರಾಜ್ಯ –ವಿರುದ್ಧ–*
*ಮಿಲಿಂದ್ ಮತ್ತು ಇತರರು (ಉಲ್ಲೇ) 4*

*3. ಎಐಆರ್ 2007 ಎಸ್‌ಸಿಡಬ್ಲ್ಯು 3892*
*ಗೀತಾ –ವಿರುದ್ಧ– ಮಧ್ಯ ಪ್ರದೇಶ ರಾಜ್ಯ*
*ಮತ್ತು ಇತರರು (ಉಲ್ಲೇ) 4*

*4. (2010) 10 ಎಸ್‌ಸಿಸಿ 677*
*ರಿತೇಶ್ ತಿವಾರಿ ಮತ್ತು ಇನ್ನೊಬ್ಬರು –ವಿರುದ್ಧ–*
*ಉತ್ತರ ಪ್ರದೇಶ ರಾಜ್ಯ ಮತ್ತು ಇತರರು (ಉಲ್ಲೇ) 4*

*5. (2008) 14 ಎಸ್‌ಸಿಸಿ 545*
*ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಇನ್ನೊಬ್ಬರು*
*–ವಿರುದ್ಧ– ವಿಲಾಸ್ ತಂದೆ: ಗೋವಿಂದರಾವ್ ಬೊಕಾಡೆ*
*ಮತ್ತು ಇನ್ನೊಬ್ಬರು (ಉಲ್ಲೇ) 4*

*6. (2013) 16 ಎಸ್‌ಸಿಸಿ 526*
*ಶಾಲಿನಿ ಗಜಾನನ್ ರಾವ್ ದಲಾಲ್ –ವಿರುದ್ಧ–*
*ನ್ಯೂ ಇಂಗ್ಲಿಷ್ ಹೈ ಸ್ಕೂಲ್*
*ಅಸೋಸಿಯೇಷನ್ ಮತ್ತು ಇತರರು (ಉಲ್ಲೇ) 4*

*7. (2005) 7 ಎಸ್‌ಸಿಸಿ 690*
*ಬ್ಯಾಂಕ್ ಆಫ್ ಇಂಡಿಯಾ –ವಿರುದ್ಧ–*
*ಅವಿನಾಶ್ ಡಿ. ಮಂಡಿವಿಕರ್ (ಉಲ್ಲೇ) 4*

*8. ಐಎಲ್‌ಆರ್ 2019 ಕೆಎಆರ್ 1708*
*ಶ್ರೀಮತಿ ಹೆಚ್.ಆರ್. ಸುಮಂಗಲ ಮತ್ತು ಇತರರು*
*–ವಿರುದ್ಧ– ಹೆಚ್ಚುವರಿ ಪೊಲೀಸ್*
*ಮಹಾ ನಿರ್ದೇಶಕರು, ಸಿವಿಲ್ ಹಕ್ಕುಗಳ*
*ಜಾರಿ ನಿರ್ದೇಶನಾಲಯ ಮತ್ತು ಇತರರು (ಉಲ್ಲೇ) 9*

*9. ಐಎಲ್‌ಆರ್ 1995 ಕೆಎಆರ್ 2712*
*ಪದುತೋಟ ರಾಮಚಂದ್ರ –ವಿರುದ್ಧ–*
*ಭಾರತ ಒಕ್ಕೂಟ (ಉಲ್ಲೇ) 11*

*10. ರಿಟ್ ಅಪೀಲು ಸಂಖ್ಯೆ: 2828/2011, ದಿ 13–5–2014*
*ಸಾಮಾನ್ಯ ವ್ಯವಸ್ಥಾಪಕ, ದಿ ನ್ಯೂ ಇಂಡಿಯ*
*ಅಷ್ಯುರನ್ಸ್ ಕಂಪನಿ ನಿಯಮಿತ ಮತ್ತು ಇತರರು*
*–ವಿರುದ್ಧ– ಶ್ರೀ ಪ್ರಕಾಶ್ ಕೇಶವ್ ಗಂಗೂಲಿ*
*ಮತ್ತು ಇತರರು (ಉಲ್ಲೇ) 11*

ಅರ್ಜಿದಾರರ ಪರ : ಶ್ರೀ ಪ್ರದೀಪ್ ಎಸ್. ಸವ್ಕಾರ್, ನ್ಯಾಯವಾದಿ.
1ನೇ ಪ್ರತ್ಯರ್ಜಿದಾರರ ಪರ : ಶ್ರೀ ಕೆ.ವಿ. ಧನಂಜಯ, ನ್ಯಾಯವಾದಿ.
2ರಿಂದ 4ನೇ ಪ್ರತ್ಯರ್ಜಿದಾರರ ಪರ : ಶ್ರೀ ಸಿ. ಜಗದೀಶ್, ವಿಶೇಷ ಸರ್ಕಾರಿ ವಕೀಲರು.

## ಸಾಮಾನ್ಯ ತೀರ್ಪು

**ನ್ಯಾಯಮೂರ್ತಿ ಶ್ರೀ ಆರ್. ದೇವದಾಸ್**:

ಇದರಲ್ಲಿನ ಒಂದನೇ ಪ್ರತ್ಯರ್ಜಿದಾರಳು ರಿಟ್ ಅರ್ಜಿ ಸಂಖ್ಯೆ: 6383/2014ಲ್ಲಿ ಎರಡು ಅರ್ಜಿಗಳನ್ನು ಸಲ್ಲಿಸಿದ್ದು, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಮತ್ತು ಅಪೀಲು ಪ್ರಾಧಿಕಾರದ ಆದೇಶವನ್ನು ಆಕೆಯು ಪ್ರಶ್ನಿಸಿದ್ದರೆ, ರಿಟ್ ಅರ್ಜಿ ಸಂಖ್ಯೆ: 29850/2014ರಲ್ಲಿ, ಮೊದಲನೇ ಪ್ರತ್ಯರ್ಜಿದಾರಳು ಅಪೀಲುದಾರ–ನಿಯೋಜಕ ಸಂಸ್ಥೆಯು ಹೊರಡಿಸಿದ ವಜಾ ಆದೇಶವನ್ನು ಪ್ರಶ್ನಿಸಿದ್ದಾಳೆ. ಎರಡೂ ರಿಟ್ ಅರ್ಜಿಗಳಲ್ಲಿ ಹೊರಡಿಸಿದ ಆದೇಶಗಳು, ಒಂದನೇ ಪ್ರತ್ಯರ್ಜಿದಾರಳು ಜಾತಿ ಕ್ಲೇಮು ಮಾಡಿದ್ದರಿಂದ ಉದ್ಭವಿಸಿದ್ದರಿಂದ, ಎರಡೂ ರಿಟ್ ಅಪೀಲುಗಳನ್ನು ಆಲಿಸಿ, ಈ ಸಾಮಾನ್ಯ ತೀರ್ಪಿನ ಮೂಲಕ ವಿಲೆ ಮಾಡಲಾಗಿದೆ.

2. ಅಪೀಲುದಾರ–ಕಂಪನಿಯು ನೀಡಿದ ಜಾಹಿರಾತಿಗೆ ಪ್ರತಿಯಾಗಿ ಒಂದನೇ ಪ್ರತ್ಯರ್ಜಿದಾರಳು, ಅನುಸೂಚಿತ ಪಂಗಡ ಪ್ರವರ್ಗಕ್ಕೆ ಮೀಸಲಿರಿಸಿದ್ದ ಏಕಮಾತ್ರ ಖಾಲಿ ಹುದ್ದೆಯಲ್ಲಿ ಇಂಜಿನಿಯರ್ (ದರ್ಜೆ–II) ಆಗಿ ನೇಮಕಾತಿ ಕೋರಿ ಅರ್ಜಿಯನ್ನು ಸಲ್ಲಿಸಿದ್ದಳು. ಒಂದನೇ ಪ್ರತ್ಯರ್ಜಿದಾರಳು, ಅನುಸೂಚಿತ ಪಂಗಡ ಪ್ರವರ್ಗದಡಿ ಬರುವ 'ಜೇನು ಕುರುಬ' ಸಮುದಾಯಕ್ಕೆ ತಾನು ಸೇರಿರುವುದಾಗಿ ಪ್ರಮಾಣೀಕರಿಸಿ, ದಿನಾಂಕ: 14.01.1991ರಂದು ಜಾತಿ ಪ್ರಮಾಣಪತ್ರವನ್ನು ಒದಗಿಸಿದ್ದಾಳೆ.

3. ಒಂದನೇ ಪ್ರತ್ಯರ್ಜಿದಾರಳಿಗೆ ಖುದ್ದಾಗಿ ಹಾಜರಿದ್ದು, ಸೇವೆಗೆ ಸೇರುವ ಸಮಯದಲ್ಲಿ ಆಕೆಯು ಸಲ್ಲಿಸಿದ್ದ ಆಕೆಯ ಜಾತಿ ಸ್ಥಿತಿಗತಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಪರಿಶೀಲನೆಗಾಗಿ ಹಾಜರುಪಡಿಸಲು ಆಕೆಯನ್ನು ಕರೆದು ಸಮಾಜ ಕಲ್ಯಾಣ ಅಧಿಕಾರಿ, ಮಂಡ್ಯ ಜಿಲ್ಲೆ ಇವರು ನೀಡಿದ ದಿನಾಂಕ: 05.10.2005ರ ನೋಟೀಸಿನೊಂದಿಗೆ ಆಕೆಯು ಭೇಟಿಯಾಗಿದ್ದಳು ಎಂಬುದು ಕಂಡುಬರುತ್ತದೆ. ವಿಚಾರಣೆ ನಂತರ, ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯು, ದಿನಾಂಕ: 11.11.2009ರ ಆದೇಶದ ಮೂಲಕ, ಒಂದನೇ ಪ್ರತ್ಯರ್ಜಿದಾರಳು 'ಜೇನು ಕುರುಬ' ಸಮುದಾಯಕ್ಕೆ

ಸೇರಿರದೆ, ಅನುಸೂಚಿತ ಪಂಗಡ ಪ್ರವರ್ಗಕ್ಕೆ ಸೇರಿರದ 'ಕುರುಬ ಗೌಡ' ಸಮುದಾಯಕ್ಕೆ ಸೇರಿದವಳೆಂದು ನಿರ್ಣಯಿಸಿದೆ. ಜಾತಿ ಪರಿಶೀಲನಾ ಸಂಬಂಧಿ ಆದೇಶವನ್ನು ಸ್ವೀಕರಿಸಿದ ಅಪೀಲುದಾರ–ಕಂಪನಿಯು, ಸೇವೆಯಿಂದ ಏಕೆ ವಜಾಗೊಳಿಸಬಾರದು ಎಂಬುದಕ್ಕೆ ಒಂದನೇ ಪ್ರತ್ಯರ್ಜಿದಾರಳಿಗೆ ಹತ್ತು ದಿನಗಳ ಒಳಗಾಗಿ ಕಾರಣ ತೋರಿಸಲು ಆಕೆಗೆ ನೋಟೀಸನ್ನು ನೀಡಿದೆ. ಒಂದನೇ ಪ್ರತ್ಯರ್ಜಿದಾರಳು ನೀಡಿದ ಉತ್ತರವನ್ನು ಪರಿಗಣಿಸಿದ ನಂತರ, ಅಪೀಲುದಾರ–ಕಂಪನಿಯು, ಆಕೆಯು ಸುಳ್ಳು ಜಾತಿ ಪ್ರಮಾಣಪತ್ರವನ್ನು ಸಲ್ಲಿಸಿದ್ದಾಳೆಂದು ನಿರ್ಣಯಿಸಿ, ದಿನಾಂಕ: 14.01.2014ರ ಆದೇಶದ ಮೂಲಕ ಸೇವೆಯಿಂದ ಒಂದನೇ ಪ್ರತ್ಯರ್ಜಿದಾರಳನ್ನು ವಜಾಗೊಳಿಸಲು ಕ್ರಮ ಕೈಗೊಂಡಿದೆ. ವಜಾಗೊಳಿಸಿದ ಆದೇಶದಿಂದ ಬಾಧಿತಳಾದ ಒಂದನೇ ಪ್ರತ್ಯರ್ಜಿದಾರಳು ಅಪೀಲು ಪ್ರಾಧಿಕಾರ, ಅನುಸೂಚಿತ ಪಂಗಡ ಕಲ್ಯಾಣ ಇವರ ಮುಂದೆ ಅಪೀಲು ಹೂಡಿ, ಮೂರನೇ ಪ್ರತ್ಯರ್ಜಿದಾರ–ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಇವರು ಹೊರಡಿಸಿದ ದಿನಾಂಕ: 11.11.2009ರ ಆದೇಶವನ್ನು ಪ್ರಶ್ನಿಸಿದ್ದಾಳೆ. ಈ ನಡುವೆ, ಒಂದನೇ ಅರ್ಜಿದಾರಳು, ಅಪೀಲುದಾರ–ಕಂಪನಿಯ ಅಧ್ಯಕ್ಷರು ಮತ್ತು ಅಪೀಲು ಪ್ರಾಧಿಕಾರ ಇವರ ಮುಂದೆ ಒಂದು ಅಪೀಲನ್ನು ಸಹ ಸಲ್ಲಿಸಿದ್ದು, ಸದರಿ ಅಪೀಲನ್ನು ದಿನಾಂಕ: 04.03.2014ರಂದು ತಿರಸ್ಕರಿಸಲಾಗಿದೆ. ಒಂದನೇ ಪ್ರತ್ಯರ್ಜಿದಾರಳು, ಜಾತಿ ಪರಿಶೀಲನಾ ಸಮಿತಿಯ ಮತ್ತು ಅದರ ಅಪೀಲು ಪ್ರಾಧಿಕಾರದ ಆದೇಶಗಳನ್ನು ಪ್ರಶ್ನಿಸಿ ಎರಡು ರಿಟ್ ಅರ್ಜಿಗಳನ್ನು ಸಲ್ಲಿಸಿದ್ದಾಳೆ ಮತ್ತು ಇನ್ನೊಂದು ರಿಟ್ ಅರ್ಜಿಯು ವಜಾಗೊಳಿಸಿದ ಆದೇಶ ಮತ್ತು ಅಪೀಲು ಪ್ರಾಧಿಕಾರದ ಆದೇಶಕ್ಕೆ ಸಂಬಂಧಿಸಿದುದಾಗಿದೆ. ಎರಡೂ ರಿಟ್ ಅರ್ಜಿಗಳನ್ನು ಪ್ರತ್ಯೇಕ ಆದೇಶಗಳ ಮೂಲಕ ಅನುಮತಿಸಿದ್ದು, ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಆದೇಶಗಳನ್ನು ಪ್ರಶ್ನಿಸಿ ಅಪೀಲುದಾರ–ಕಂಪನಿಯು ಈ ನ್ಯಾಯಾಲಯದ ಮುಂದೆ ಬಂದಿದೆ.

4. ***ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಎಫ್‌ಸಿಐ ಮತ್ತು ಇತರರು –ವಿರುದ್ಧ– ಜಗದೀಶ್ ಬಲರಾಮ್ ಬಹಿರಾ ಮತ್ತು ಇತರರು***[1] ಮೊಕದ್ದಮೆಯಲ್ಲಿ

1. ಎಐಆರ್ 2017 ಎಸ್‌ಸಿ 3271

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೂವರು ನ್ಯಾಯಾಧೀಶರ ವಿಸ್ತೃತ ಪೀಠವು, ಸುಳ್ಳು ಜಾತಿ ಪ್ರಮಾಣಪತ್ರದ ಆಧಾರದ ಮೇಲೆ ನೇಮಕಾತಿಗಳನ್ನು ಪಡೆಯುವ ವಿಷಯಗಳಲ್ಲಿ ಮತ್ತು ಅದರ ಪರಿಣಾಮಗಳನ್ನು ಕುರಿತು ಸರ್ವೋಚ್ಚ ನ್ಯಾಯಾಲಯದ ಹಿಂದಿನ ಎಲ್ಲಾ ತೀರ್ಪುಗಳನ್ನು ಪರಿಗಣಿಸಿದೆ ಎಂದು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ, ***ಮಹಾರಾಷ್ಟ್ರ ರಾಜ್ಯ –ವಿರುದ್ಧ– ಮಿಲಿಂದ್ ಮತ್ತು ಇತರರು***[2]; ***ಗೀತಾ –ವಿರುದ್ಧ– ಮಧ್ಯ ಪ್ರದೇಶ ರಾಜ್ಯ ಮತ್ತು ಇತರರು***[3]; ***ರಿತೇಶ್ ತಿವಾರಿ ಮತ್ತು ಇನ್ನೊಬ್ಬರು –ವಿರುದ್ಧ– ಉತ್ತರ ಪ್ರದೇಶ ರಾಜ್ಯ ಮತ್ತು ಇತರರು***[4]; ***ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಇನ್ನೊಬ್ಬರು –ವಿರುದ್ಧ– ವಿಲಾಸ್ ತಂದೆ: ಗೋವಿಂದರಾವ್ ಬೊಕಾಡೆ ಮತ್ತು ಇನ್ನೊಬ್ಬರು***[5]; ***ಶಾಲಿನಿ ಗಜಾನನ ರಾವ್ ದಲಾಲ್ –ವಿರುದ್ಧ– ನ್ಯೂ ಇಂಗ್ಲಿಷ್ ಹೈ ಸ್ಕೂಲ್ ಅಸೋಸಿಯೇಷನ್ ಮತ್ತು ಇತರರು***[6]; ***ಬ್ಯಾಂಕ್ ಆಫ್ ಇಂಡಿಯಾ –ವಿರುದ್ಧ– ಅವಿನಾಶ್ ಡಿ. ಮಂಡಿವಿಕರ್***[7] ಮೊಕದ್ದಮೆಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯಗಳನ್ನು ಹಾಗೂ ಇತರ ಎಲ್ಲಾ ನಿರ್ಣಯಗಳನ್ನು ***ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಎಫ್‌ಸಿಐ*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಪರಿಗಣಿಸಲಾಗಿದೆ ಎಂದು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ ಮಾನ್ಯ ನ್ಯಾಯವಾದಿಗಳು, ರಾಜ್ಯ ಸರ್ಕಾರವು ಹೊರಡಿಸಿದ ದಿನಾಂಕ: 11.03.2002ರ ಸುತ್ತೋಲೆಯನ್ನು ಗಮನದಲ್ಲಿಟ್ಟುಕೊಂಡು, ಒಂದನೇ ಪ್ರತ್ಯರ್ಜಿದಾರರು ಮಂಡಿಸಿದ ವಾದದ ಆಧಾರವನ್ನು, ಇತರ ರಾಜ್ಯ ಸರ್ಕಾರಗಳು ಮತ್ತು ಭಾರತ ಸರ್ಕಾರವು ಹೊರಡಿಸಿದ ಈ ಸಂಬಂಧದ ಆದೇಶಗಳು/ಸುತ್ತೋಲೆಗಳು ಇದ್ದಾಗ್ಯೂ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪರಿಗಣಿಸಿದೆ ಮತ್ತು ಸರ್ಕಾರದ ಯಾವುದೇ ಗೊತ್ತುವಳಿ ಅಥವಾ ಸುತ್ತೋಲೆಯು, ಸಂವಿಧಾನದ ಅಥವಾ ಶಾಸನಾತ್ಮಕ ನಿಯಮಗಳ ಮೇಲೆ ಆಧ್ಯಾರೋಹಿ ಪರಿಣಾಮ ಹೊಂದಿರಲು ಸಾಧ್ಯವಿಲ್ಲವೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರಪೇಕ್ಷವಾಗಿ ನಿರ್ಣಯಿಸಿದೆ ಎಂದು

2. ಎಐಆರ್ 2001 ಎಸ್‌ಸಿ 393
3. ಎಐಆರ್ 2007 ಎಸ್‌ಸಿಡಬ್ಲ್ಯು 3892
4. (2010) 10 ಎಸ್‌ಸಿಸಿ 677
5. (2008) 14 ಎಸ್‌ಸಿಸಿ 545
6. (2013) 16 ಎಸ್‌ಸಿಸಿ 526
7. (2005) 7 ಎಸ್‌ಸಿಸಿ 690

ನಿವೇದಿಸಿಕೊಂಡಿದ್ದಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ನಿರ್ಣಯದ ಹಿನ್ನಲೆಯಲ್ಲಿ, ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಆದೇಶವನ್ನು ತಳ್ಳಿ ಹಾಕುತ್ತಲೇ, ಒಂದನೇ ಪ್ರತ್ಯರ್ಜಿದಾರಳು ಸಲ್ಲಿಸಿದ ರಿಟ್ ಅರ್ಜಿಯು ವಜಾಗೊಳ್ಳಲು ಯೋಗ್ಯವಾಗಿದೆ ಎಂದು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದ್ದಾರೆ.

5. ಇದಕ್ಕೆ ತದ್ವಿರುದ್ಧವಾಗಿ, ಒಂದನೇ ಪ್ರತ್ಯರ್ಜಿದಾರಳು, ಅನುಸೂಚಿತ ಪಂಗಡ ಪ್ರವರ್ಗವಾಗಿರುವ 'ಜೇನು ಕುರುಬ' ಸಮುದಾಯಕ್ಕೆ ಸೇರಿರುವಳೆಂಬ ಸಂಗತಿಯನ್ನು ಆಕೆಯ ಶಾಲಾ ದಾಖಲೆಗಳು ಸಾಬೀತುಪಡಿಸಿವೆ ಎಂದು ಒಂದನೇ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ. ಒಂದನೇ ಪ್ರತ್ಯರ್ಜಿದಾರಳು 'ಜೇನು ಕುರುಬ' ಸಮುದಾಯಕ್ಕೆ ಸೇರಿರುವಳೆಂದು ಹಾಗೂ ಆಕೆಯ ಕುಟುಂಬ ಮತ್ತು ಪೂರ್ವಿಕರು ಸದರಿ ಸಮುದಾಯಕ್ಕೆ ಸೇರಿರುವರೆಂಬುದಾಗಿ ಆಕೆಯು ನಂಬಿರುವಳೆಂದು ವಾದಿಸಿದ್ದಾರೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಒಂದನೇ ಪ್ರತ್ಯರ್ಜಿದಾರಳು ದುರುದ್ದೇಶದಿಂದ ವರ್ತಿಸಿಲ್ಲವೆಂದು ಮತ್ತು ಆಕೆಯನ್ನು ಸುಳ್ಳು ಕ್ಲೇಮನ್ನು ಮಾಡಿದ ಆರೋಪಿಯನ್ನಾಗಿಸಲಾಗುವುದಿಲ್ಲವೆಂದು; ಆಕೆಯ ಪಾಲಕರು ಆಕೆಗೆ ನೀಡಿದ ಮಾಹಿತಿಯು ನಿಜವೆಂದು ಆಕೆಯು ಪ್ರಾಮಾಣಿಕವಾಗಿ ನಂಬಿದ್ದಾಳೆ ಮತ್ತು ಅದರಿಂದಾಗಿ, ಒಂದನೇ ಪ್ರತ್ಯರ್ಜಿದಾರಳನ್ನು ಸುಳ್ಳು ಮತ್ತು ಅಪರಾಧಿಕ ಉದ್ದೇಶ ಹೊಂದಿದ ಅಪರಾಧಿಯೆಂದು ನಿರ್ಣಯಿಸಲು ಅಪರಾಧಿಕ ಮನಸ್ಸಿನ ಯಾವುದೇ ಮೂಲಾಂಶವಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.

6. ಪರ್ಯಾಯ ನಿವೇದನೆಯಾಗಿ, ಒಂದನೇ ಪ್ರತ್ಯರ್ಜಿದಾರಳ ಪರ ಮಾನ್ಯ ನ್ಯಾಯವಾದಿಗಳು, ರಾಷ್ಟ್ರಪತಿಗಳ ಆದೇಶಗಳ ಅಡಿಯಲ್ಲಿ ಅನುಸೂಚಿತ ಪಂಗಡ ಎಂದು ಪ್ರವರ್ಗೀಕರಿಸಿದ 'ಜೇನು ಕುರುಬ' ಸಮುದಾಯ ಅಥವಾ 'ನಾಯಕ' ಸಮುದಾಯಕ್ಕೆ ತಾವು ಸೇರಿದ್ದೇವೆ ಎಂದು ಜಾತಿ ಪ್ರಮಾಣಪತ್ರಗಳನ್ನು ಪಡೆದುಕೊಂಡಿರುವಂಥ ಎಲ್ಲಾ ವ್ಯಕ್ತಿಗಳಿಗೆ ಒಂದು–ಸಮಯದ ಕ್ಷಮಾದಾನ ನೀಡಿ ದಿನಾಂಕ: 11.03.2002ರ ಸುತ್ತೋಲೆ ಸಂಖ್ಯೆ: ಎಸ್‌ಡಬ್ಲ್ಯುಡಿ 713 ಎಸ್‌ಎಡಿ

93ನ್ನು ರಾಜ್ಯ ಸರ್ಕಾರವು ಹೊರಡಿಸಿದೆ ಎಂದು ನಿವೇದಿಸಿಕೊಂಡಿದ್ದಾರೆ. ದಿನಾಂಕ: 11.03.2002ರ ಸುತ್ತೋಲೆಯ ಪ್ರಸ್ತಾವನೆಯು, 'ಕಾಡು ಕುರುಬ', 'ಜೇನು ಕುರುಬ' ಮುಂತಾದಂಥ ಸಮುದಾಯಗಳ ಕೆಲವು ಪ್ರವರ್ಗಗಳ ಸಂಬಂಧವಾಗಿ ಸಮಾಜದಲ್ಲಿ ಗೊಂದಲ ಚಾಲ್ತಿಯಲ್ಲಿದೆ ಎಂದು ಸ್ಪಷ್ಟವಾಗಿ ಸೂಚಿಸುತ್ತದೆ. ಈ ಚಾಲ್ತಿಯಲ್ಲಿರುವ ಗೊಂದಲದ ಕಾರಣದಿಂದ, 'ಕುರುಬ' ಸಮುದಾಯಕ್ಕೆ ಮತ್ತು 'ಕಾಡು ಕುರುಬ' ಸಮುದಾಯಕ್ಕೆ ಸೇರಿರುವ ವ್ಯಕ್ತಿಗಳು ಅನುಸೂಚಿತ ಪಂಗಡಗಳ ಜಾತಿ ಪ್ರಮಾಣಪತ್ರಗಳನ್ನು ಪಡೆದಿದ್ದಾರೆಂದು ರಾಜ್ಯ ಸರ್ಕಾರವು ಒಪ್ಪಿಕೊಂಡಿದೆ. ಆದುದರಿಂದ, ಒಂದು ಸಮಯದ ಕ್ಷಮಾದಾನವಾಗಿ, ರಾಜ್ಯ ಸರ್ಕಾರವು ಕ್ಷಮಾದಾನವನ್ನು ಘೋಷಿಸಿದ್ದು, ಅಂಥ ಎಲ್ಲಾ ವ್ಯಕ್ತಿಗಳಿಗೆ ಅವರ ಜಾತಿ ಪ್ರಮಾಣಪತ್ರಗಳನ್ನು ಒಪ್ಪಿಸಲು ಕರೆ ಕೊಟ್ಟಿದೆ ಮತ್ತು ಸುಳ್ಳು ಪ್ರಮಾಣಪತ್ರಗಳ ಸಲ್ಲಿಸುವಿಕೆಯು ಕಾರಣದ ಮೇಲೆ ಅಂಥ ವ್ಯಕ್ತಿಗಳ ಸೇವೆಯನ್ನು ಕೊನೆಗೊಳಿಸಬಾರದೆಂದು ಪ್ರಾಧಿಕಾರಗಳಿಗೆ ನಿರ್ದೇಶಿಸಿದೆ; ಇದಲ್ಲದೆ, ಅಂಥ ವ್ಯಕ್ತಿಗಳ ವಿರುದ್ಧ ಯಾವುದೇ ಕ್ರಿಮಿನಲ್ ವ್ಯವಹರಣೆಗಳನ್ನು ಮುಂದುವರಿಸತಕ್ಕದ್ದಲ್ಲವೆಂದು ಸುತ್ತೋಲೆಯು ಉಪಬಂಧಿಸುತ್ತದೆ. ಸದರಿ ಸುತ್ತೋಲೆಯ ಹಿನ್ನಲೆಯಲ್ಲಿ, ಮಾನ್ಯ ನ್ಯಾಯವಾದಿಗಳು ಅಂಥ ಹಲವಾರು ವ್ಯಕ್ತಿಗಳಿಗೆ ಈ ಪ್ರಯೋಜನವನ್ನು ನೀಡಿರುವುದರಿಂದ, ಅದೇ ಪ್ರಯೋಜನವನ್ನು ಒಂದನೇ ಪ್ರತ್ಯರ್ಜಿದಾರಳಿಗೆ ಸಹ ನೀಡಬೇಕೆಂದು ನಿವೇದಿಸಿಕೊಂಡಿದ್ದಾರೆ. ಈ ಸಂಬಂಧದಲ್ಲಿ, ಅಪೀಲುದಾರ–ಕಂಪನಿಯು ಒಬ್ಬ ಉದ್ಯೋಗಿಗೆ ಅಂಥ ಪ್ರಯೋಜನವನ್ನು ನೀಡಿದರೂ, ಅದನ್ನು ಇದರಲ್ಲಿನ ಒಂದನೇ ಪ್ರತ್ಯರ್ಜಿದಾರಳು ನಿರಾಕರಿಸಿದ್ದಾಳೆಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿರುವರು.

7. ಇನ್ನೊಂದೆಡೆ, ಎರಡನೇ ಪ್ರತ್ಯರ್ಜಿದಾರ–ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಪರವಾಗಿ ಹಾಜರಾದ ಮಾನ್ಯ ವಿಶೇಷ ಸರ್ಕಾರಿ ವಕೀಲರಾದ ಶ್ರೀ ಜಗದೀಶ್ ಅವರು, ದಿನಾಂಕ: 11.03.2002ರ ಸುತ್ತೋಲೆಯ ಪ್ರಯೋಜನವನ್ನು ಕೇಂದ್ರ ಸರ್ಕಾರಿ ನೌಕರರಿಗೆ ವಿಸ್ತರಿಸಲಾಗುವುದಿಲ್ಲವೆಂದು ಸ್ಪಷ್ಟಪಡಿಸಿ, ದಿನಾಂಕ: 14.06.2011ರ ಸುತ್ತೋಲೆಯನ್ನು ರಾಜ್ಯ ಸರ್ಕಾರವು ಹೊರಡಿಸಿದೆ ಎಂದು

ನಿವೇದಿಸಿಕೊಂಡಿದ್ದಾರೆ. ಆದುದರಿಂದ, ದಿನಾಂಕ: 11.03.2002ರ ಸುತ್ತೋಲೆ ಅಡಿಯಲ್ಲಿ ಒಂದನೇ ಅರ್ಜಿದಾರಳು ಪ್ರಯೋಜನ ಕೋರಲಾಗುವುದಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.

8. ಅಪೀಲುದಾರ–ಪ್ರತ್ಯರ್ಜಿದಾರ ಸಂಖ್ಯೆ: 1 ಇವರ ಪರ ನ್ಯಾಯವಾದಿಗಳ ಮತ್ತು ವಿಶೇಷ ಸರ್ಕಾರಿ ವಕೀಲರ ವಾದಗಳನ್ನು ನಾವು ಆಲಿಸಿದ್ದೇವೆ. ಮಾನ್ಯ ನ್ಯಾಯವಾದಿಗಳು ಉಲ್ಲೇಖಿಸಿದ ರಿಟ್ ಅರ್ಜಿಗಳನ್ನು ಮತ್ತು ನಿರ್ಣಯಗಳನ್ನು ನಾವು ಪರಿಶೀಲಿಸಿದ್ದೇವೆ.

9. ***ಶ್ರೀಮತಿ ಹೆಚ್.ಆರ್. ಸುಮಂಗಲ ಮತ್ತು ಇತರರು –ವಿರುದ್ಧ– ಹೆಚ್ಚುವರಿ ಪೋಲೀಸ್ ಮಹಾ ನಿರ್ದೇಶಕರು, ಸಿವಿಲ್ ಹಕ್ಕುಗಳ ಜಾರಿ ನಿರ್ದೇಶನಾಲಯ ಮತ್ತು ಇತರರು***[9] ಮೊಕದ್ದಮೆಯಲ್ಲಿನ ವಿಷಯಗಳ ತಂಡದಲ್ಲಿ ಒಬ್ಬರೇ ಆಸೀನರಾಗಿದ್ದ ನಮ್ಮಲ್ಲಿ ಒಬ್ಬರಿಗೆ, ಇಂಥಹುವೇ ವಿವಾದಗಳನ್ನು ಪರಿಶೀಲಿಸುವ ಸಂದರ್ಭ ಒದಗಿತ್ತು. ರಿಟ್ ಅಪೀಲು ಸಂಖ್ಯೆ: 319/2019 ಮತ್ತು ರಿಟ್ ಅಪೀಲು ಸಂಖ್ಯೆ: 189–193/2019 ಇವುಗಳಲ್ಲಿ ಸಮನ್ವಯ ವಿಭಾಗೀಯ ಪೀಠವು ನಿರ್ಣಯವನ್ನು ಎತ್ತಿಹಿಡಿದಿತ್ತು.

10. ಒಂದು ಸಮಯದ ಕ್ರಮವಾಗಿ ರಾಜ್ಯ ಸರ್ಕಾರವು ಹೊರಡಿಸಿದ ಸುತ್ತೋಲೆಯನ್ನನುಸರಿಸಿ ಪ್ರಯೋಜನಗಳನ್ನು ಪುನಃ ಪಡೆಯಲಾಗದು; ಕೇಂದ್ರ ಸರ್ಕಾರಿ ನೌಕರರಿಗೆ ಸಂಬಂಧಿಸಿದ ಸ್ಥಿತಿಗತಿಯನ್ನು ಸ್ಪಷ್ಟಪಡಿಸಿ ರಾಜ್ಯ ಸರ್ಕಾರವು ಹೊರಡಿಸಿದ ದಿನಾಂಕ: 14.06.2011ರ ತರುವಾಯದ ಸುತ್ತೋಲೆ; ಜಾತಿ ಪ್ರಮಾಣಪತ್ರವನ್ನು ಪಡೆಯಲು ಅದು ತಪ್ಪು ಪ್ರಾತಿನಿಧ್ಯ ಅಥವಾ ಮೋಸ ಎಸಗುವ ಮೊಕದ್ದಮೆಯಲ್ಲ ಹಾಗೂ ಆದುದರಿಂದಾಗಿ, ನೇಮಕಾತಿ ಉಳಿಸುವ ಸಂರಕ್ಷಣೆ ಇತ್ಯಾದಿ ವಾದಗಳನ್ನು ಸದರಿ ನಿರ್ಣಯದಲ್ಲಿ ಪರಿಶೀಲಿಸಲಾಗಿದೆ.

---

9. ಐಎಲ್‌ಆರ್ 2019 ಕೆಎಆರ್ 1708

11. ***ಪದುತೋಟ ರಾಮಚಂದ್ರ –ವಿರುದ್ಧ– ಭಾರತ ಒಕ್ಕೂಟ***[9] ಮತ್ತು ದಿನಾಂಕ: 13.05.2014ರಲ್ಲಿ ನಿರ್ಧರಿಸಲಾಗಿದ್ದಂಥ ***ಸಾಮಾನ್ಯ ವ್ಯವಸ್ಥಾಪಕ, ದಿ ನ್ಯೂ ಇಂಡಿಯ ಅಷ್ಯುರನ್ಸ್ ಕಂಪನಿ ನಿಯಮಿತ ಮತ್ತು ಇತರರು –ವಿರುದ್ಧ– ಶ್ರೀ ಪ್ರಕಾಶ್ ಕೇಶವ್ ಗಂಗೂಲಿ ಮತ್ತು ಇತರರು***[10] ಈ ಮೊಕದ್ದಮೆಗಳಲ್ಲಿ ಈ ನ್ಯಾಯಾಲಯದ ಎರಡು ವಿಭಾಗೀಯ ಪೀಠಗಳು, ರಾಜ್ಯ ಸರ್ಕಾರವು ಹೊರಡಿಸುವ ಸರ್ಕಾರಿ ಆದೇಶಗಳನ್ನು/ ಸುತ್ತೋಲೆಗಳನ್ನು, ರಾಷ್ಟ್ರಪತಿಗಳ ಆದೇಶಗಳನ್ನು ತಿದ್ದುಪಡಿ ಮಾಡಲು ಅಥವಾ ಬದಲಾಯಿಸುವ ಪ್ರಾಧಿಕಾರ ಅಥವಾ ಸಕ್ಷಮತೆಯನ್ನು ಹೊಂದಿರುವುದಿಲ್ಲವಾದ್ದರಿಂದ ಸುಲಭವಾಗಿ ನಿರ್ಲಕ್ಷಿಸಬಹುದಾಗಿದೆ ಎಂದು ನಿರಪೇಕ್ಷವಾಗಿ ತೀರ್ಪು ನೀಡಿವೆ ಎಂಬುದನ್ನು ಇಲ್ಲಿ ಪುನರುಚ್ಚರಿಸುವುದು ಸೂಕ್ತವಾಗಿದೆ.

12. ಈ ರಿಟ್ ಅಪೀಲಿನಲ್ಲಿ ಎತ್ತಲಾದಂತೆ ಅಂಥಹುದೇ ವಾದವನ್ನು ***ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಎಫ್‌ಸಿಐ*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಮಾನ್ಯ ನ್ಯಾಯಮೂರ್ತಿಗಳ ಮುಂದೆ ಎತ್ತಲಾಗಿತ್ತು. ವಿವಾದದ ತೀರ್ಮಾನದ ಭಾಗವನ್ನು ಅಡಕವಾಗಿ ಹಿಡಿದಿಡುವ ತೀರ್ಪಿನ 4ನೇ ಕಂಡಿಕೆಯ ಉದ್ಧೃತ ಭಾಗವನ್ನು ತೆಗೆದುಕೊಳ್ಳುವುದು ಪ್ರಯೋಜನಕಾರಿಯಾದುದಾಗಿದೆ. 4ನೇ ಕಂಡಿಕೆಯನ್ನು ಈ ಮುಂದಿನಂತೆ ಓದಲಾಗಿದೆ:

> "4. ನ್ಯಾಯಾಲಯದ ಎದುರಿಗಿರುವ ಸರದಿ ಮೊಕದ್ದಮೆಗಳ ತನಿಖೆಯ ಆಧಾರದ ಮೇಲೆ ಅಸಿಂಧುವೆಂದು ಕಂಡುಬಂದ ಫಲಾನುಭವಿ ಗುಂಪಿಗೆ ಸೇರಿದ ಕ್ಲೇಮಿನ ಆಧಾರದ ಮೇಲೆ ಸಾರ್ವಜನಿಕ ನಿಯೋಜನೆಯ ಪ್ರಯೋಜನವನ್ನು ಕೋರಿರುವ ವ್ಯಕ್ತಿಗಳನ್ನು ಒಳಗೊಂಡಿದೆ. ಅನುಸೂಚಿತ ಜಾತಿಗೆ ಅಥವಾ ಸಂದರ್ಭಾನುಸಾರ ಹಿಂದುಳಿದ ಸಮುದಾಯದ ಅನುಸೂಚಿತ ಪಂಗಡಕ್ಕೆ ಸೇರಿರುವ ಕ್ಲೇಮಿನ ಅಸಿಂಧುತ್ವದ ಹೊರತಾಗಿ, ನ್ಯಾಯಿಕ

9. ಐಎಲ್ಆರ್ 1995 ಕೆಎಆರ್ 2712

10. ರಿಟ್ ಅಪೀಲು ಸಂಖ್ಯೆ: 2828/2011, ದಿನಾಂಕ: 13-5-2014

ವಿಮರ್ಶೆಯ ಅಧಿಕಾರದ ಚಲಾವಣೆಯಲ್ಲಿ ನ್ಯಾಯಾಲಯದ ಮಧ್ಯಪ್ರವೇಶ ಅನ್ವಯವಾಗುತ್ತದೆ. ಅಧಿಕಾರವ್ಯಾಪ್ತಿಯು ಮಧ್ಯಸ್ಥಿಕೆಯ ಆಧಾರವು, ಸಮಯ ಮೀರಿದ ನಂತರ ಈ ನ್ಯಾಯಸಮ್ಮತತೆಯ ಹಕ್ಕುಗಳು ಉದ್ಭವಿಸುತ್ತವೆ ಎಂಬ ಮತ್ತು ಈ ನ್ಯಾಯಸಮ್ಮತ ಹಕ್ಕುಗಳನ್ನು ಉಚ್ಚ ನ್ಯಾಯಾಲಯದ ಮೂಲಕವಾಗಲಿ (226ನೇ ಅನುಚ್ಛೇದ ಅಡಿಯಲ್ಲಿ ಅದರ ಅಧಿಕಾರವ್ಯಾಪ್ತಿ ಚಲಾವಣೆಯಲ್ಲಿ) ಅಥವಾ ಈ ನ್ಯಾಯಾಲಯದ ಮೂಲಕವಾಗಲಿ (142ನೇ ಅನುಚ್ಛೇದದ ಅಡಿಯಲ್ಲಿ ಸಂಪೂರ್ಣ ನ್ಯಾಯವನ್ನು ನೀಡುವ ಸಂವಿಧಾನದ ಪ್ರಕಾರ್ಯವನ್ನು ಅದು ನಿರ್ವಹಿಸುವಾಗ) ಸಂರಕ್ಷಿತವಾಗುವಲ್ಲಿ ಸಮರ್ಥವಾಗಿವೆ ಎಂದು ದೃಢವಾಗಿ ಹೇಳುವಲ್ಲಿ ಇವೆ. ಮೊಕದ್ದಮೆಗಳ ಪ್ರಸ್ತುತ ತಂಡವು ಅಂಥ ಸಮನ್ಯಾಯ ಹಕ್ಕುಗಳು ಕಾನೂನಿನಲ್ಲಿ ಊರ್ಜಿತವಾಗುವವೇ ಮತ್ತು ಹಾಗೆ ಊರ್ಜಿತವಾದಲ್ಲಿ, ಯಾವ ಜಾತಿ, ಪಂಗಡ ಅಥವಾ ವರ್ಗಕ್ಕಾಗಿ ಮೀಸಲಾತಿಯನ್ನು ಉದ್ದೇಶಿಸಲಾಗಿದೆಯೋ ಆ ಜಾತಿ, ಪಂಗಡ ಅಥವಾ ವರ್ಗಕ್ಕೆ ಆ ವ್ಯಕ್ತಿಗಳು ಸೇರಿಲ್ಲವೆಂಬ ಸಂಗತಿಯ ಹೊರತಾಗಿ, ಮೀಸಲಾತಿಯ ಪ್ರಯೋಜನ ಪಡೆದಿರುವ ವ್ಯಕ್ತಿಗಳ ಸಂರಕ್ಷಣೆಗೆ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಪರಿಭಾಷಿಸುವಂಥ ಮಿತಿಗಳೇನು ಎಂಬ ಮೂಲಭೂತ ವಿವಾದವನ್ನು ಎತ್ತುತ್ತದೆ."

13. ***ಕುಮಾರಿ ಮಾಧುರಿ ಪಾಟೀಲ್*** ಮೊಕದ್ದಮೆಯಿಂದ (ಮೇಲೆ ಹೇಳಿದ) ***ನಿಧಿ ಕೈಮ್*** ಮೊಕದ್ದಮೆವರೆಗಿನ (ಮೇಲೆ ಹೇಳಿದ) ಎಲ್ಲಾ ಮೊಕದ್ದಮೆಗಳಲ್ಲಿ ನೀಡಲಾದ ಹಿಂದಿನ ಎಲ್ಲಾ ತೀರ್ಪುಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಚ್ಚರಿಕೆಯಿಂದ ಕೂಲಂಕಷವಾಗಿ ಪರಿಶೀಲಿಸಿದೆ. ಪರಿಶೀಲನಾ ಸಮಿತಿಯು ಜಾತಿ ಕ್ಲೇಮನ್ನು ಅಸಿಂಧುಗೊಳಿಸುವುದು ಮಾತ್ರ ಪ್ರಯೋಜನಗಳನ್ನು ಹಿಂತೆಗೆದುಕೊಳ್ಳುವ ಅಥವಾ ಉದ್ಯೋಗದಿಂದ ಬಿಡುಗಡೆಗೊಳಿಸುವ ಅಥವಾ ***ಮಹಾರಾಷ್ಟ್ರ ರಾಜ್ಯ***

***–ವಿರುದ್ಧ– ಮಿಲಿಂದ್ ಮತ್ತು ಇತರರು*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯಕ್ಕೆ ಮುಂಚೆ ಅಂತಿಮಗೊಂಡಿರುವ ನೇಮಕಾತಿಗಳ ರದ್ದಿಯಾತಿಯ ಪರಿಣಾಮಗಳನ್ನು ಸಂಭವಿಸುವಂತೆ ಮಾಡುವುದಿಲ್ಲ. ಸರ್ಕಾರದ ಸುತ್ತೋಲೆಗಳು, ಆದೇಶಗಳು ಮತ್ತು ನಿರ್ಣಯಗಳು ಒಂದು ಸಮಯದ ಕ್ಷಮಾದಾನವನ್ನು ನೀಡಿವೆ ಎಂಬ ಅಂಥಹುವೇ ಕಾರಣಗಳ ಆಧಾರದ ಮೇಲೆ ಸಂರಕ್ಷಣೆಯನ್ನು ಕೋರಿದ್ದು, ಸುಳ್ಳು ಜಾತಿ ಪ್ರಮಾಣಪತ್ರವನ್ನು ಸಂಬಂಧಪಟ್ಟ ರಾಜ್ಯ ಅಧಿನಿಯಮಿತಿಗಳಿಗೆ ತರುವಾಯದಲ್ಲಿ ಪಡೆಯಲಾಗಿದ್ದ ಪ್ರಕರಣಗಳಲ್ಲಿ ಮಾತ್ರ ದಂಡನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಬಹುದಾಗಿದೆ.

14. ಸರ್ಕಾರಿ ಆದೇಶಗಳ ಅಡಿಯಲ್ಲಿ ಸಂರಕ್ಷಣೆಯನ್ನು ಕೋರಿರುವಷ್ಟರಮಟ್ಟಿಗೆ, ಅದನ್ನು ಸರ್ವೋಚ್ಚ ನ್ಯಾಯಾಲಯವು ಅಧಿಕಾರಯುತವಾಗಿ ನಿರ್ಲಕ್ಷಿಸಿದೆ. ***ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಎಫ್‌ಸಿಐ*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಕಂಡಿಕೆ ಸಂಖ್ಯೆ: 53ರಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದೆ:

> "53. ಆಡಳಿತಾತ್ಮಕ ಸುತ್ತೋಲೆಗಳು ಮತ್ತು ಸರ್ಕಾರದ ನಿರ್ಣಯಗಳು ವಿಧಾಯಿ ಆಜ್ಞಾಪನೆಗೆ ಅಧೀನವಾಗಿರುತ್ತವೆ ಮತ್ತು ಸಂವಿಧಾನದ ಮಾನದಂಡಗಳಿಗಾಗಲಿ ಅಥವಾ ಶಾಸನಾತ್ಮಕ ತತ್ವಗಳಿಗಾಗಲಿ ವಿರುದ್ಧವಾಗಿರುವಂತಿಲ್ಲ. ಅಭ್ಯರ್ಥಿಗೆ ಉದ್ದೇಶಿಸಿದ ಹುದ್ದೆಗೆ ಗೊತ್ತುಪಡಿಸಿದ ಜಾತಿ, ಪಂಗಡ ಅಥವಾ ವರ್ಗಕ್ಕೆ ಆತನು ಅಥವಾ ಆಕೆಯು ಸೇರಿರುವನೆಂಬ/ಳೆಂಬ ಏಕೈಕ ಆಧಾರದ ಮೇಲೆ ಹುದ್ದೆಗೆ ನೇಮಕಾತಿಯನ್ನು ಅಭ್ಯರ್ಥಿಯು ಪಡೆದಿರುವಲ್ಲಿ ಮತ್ತು ಆ ಕ್ಲೇಮು ಸುಳ್ಳೆಂದು ಪರಿಶೀಲನಾ ಸಮಿತಿಯು ಪರಿಶೀಲಿಸಿದ ನಂತರ ಕಂಡುಬಂದಿದ್ದಲ್ಲಿ, ಅಂಥ ವ್ಯಕ್ತಿಯ ಸೇವೆಯನ್ನು ಆಡಳಿತಾತ್ಮಕ ಸುತ್ತೋಲೆಗಳ ಅಥವಾ ನಿರ್ಣಯಗಳ ಅವಲಂಬನೆಯನ್ನು ಪಡೆಯುವ ಮೂಲಕ ರಕ್ಷಿಸಲಾಗುವುದಿಲ್ಲ. ದುರಾಕ್ರಮಣದ ಕ್ಲೇಮುಗಳ ರಕ್ಷಣೆಯು,

> ಸಂವಿಧಾನ ಯೋಜನೆಗಷ್ಟೇ ಅಲ್ಲದೆ ಶಾಸನಾತ್ಮಕ ಆಜ್ಞಾಪನೆಗು ಸಹ ವಿರುದ್ಧವಾದ ಕ್ರಮವಾಗುತ್ತದೆ. ಸರ್ಕಾರದ ಯಾವುದೇ ನಿರ್ಣಯ ಅಥವಾ ಸುತ್ತೋಲೆಯು ಸಂವಿಧಾನವನ್ನು ಅಥವಾ ಶಾಸನಾತ್ಮಕ ಮಾನದಂಡಗಳನ್ನು ಅಧ್ಯಾರೋಹಿಸಲಾಗುವುದಿಲ್ಲ. ಸರ್ಕಾರವು ತನ್ನದೇ ಸುತ್ತೋಲೆಗಳಿಂದ ಬಂಧಿತವಾಗಿರುತ್ತದೆ ಎಂಬ ತತ್ವವು ಸುಸ್ಥಾಪಿತವಾಗಿದ್ದರೂ, ಪ್ರಸ್ತುತದಂಥ ಸನ್ನಿವೇಶಕ್ಕೆ ಅದನ್ನು ಅನ್ವಯಿಸಲಾಗುವುದಿಲ್ಲ. ಯಾವ ಸಮುದಾಯ ಅಥವಾ ಪಂಗಡಕ್ಕೆ ಮೀಸಲಾತಿಯನ್ನು ಉದ್ದೇಶಿಸಲಾಗಿದೆಯೋ ಆ ಸಮುದಾಯಕ್ಕೆ ಅಥವಾ ಪಂಗಡಕ್ಕೆ ಸೇರಿರದ ವ್ಯಕ್ತಿಯೆಂದು ಕಂಡುಬಂದ ಅಭ್ಯರ್ಥಿಯ ಸೇವೆಯನ್ನು ರಕ್ಷಿಸುವುದು, ಅನರ್ಹ ವ್ಯಕ್ತಿಗೆ ಸ್ಥಾನ ನೀಡುವ ಮೂಲಕ ನ್ಯಾಯಸಮ್ಮತ ಹಕ್ಕುಗಳನ್ನು ನಿರ್ಲಕ್ಷಿಸಲಾಗಿರುವ ಮೀಸಲಾತಿ ಪಡೆದ ಸಮುದಾಯಗಳ ಪ್ರಾಮಾಣಿಕ ಸದಸ್ಯರ ಕಾನೂನುಬದ್ಧ ಹಕ್ಕುಗಳ ಮೇಲೆ ಗಣನೀಯ ಅತಿಕ್ರಮಣವಾಗುತ್ತದೆ. ಮೀಸಲಾತಿ ನೀಡಲಾದ ಗುಂಪುಗಳ ಅಥವಾ ಸಮುದಾಯಗಳ ಪ್ರಾಮಾಣಿಕ ಸದಸ್ಯರ ಹಕ್ಕುಗಳಿಗೆ ನಷ್ಟವುಂಟಾಗುವ ರೀತಿಯಲ್ಲಿ ಬಾಧಕವಾಗಿರುವಂಥ ಸಂದರ್ಭದಲ್ಲಿ, ಸರ್ಕಾರದ ಸುತ್ತೋಲೆಗಳು ಅಥವಾ ನಿರ್ಣಯಗಳು ಅವರ ನಷ್ಟಕ್ಕೆ ಕಾರಣವಾಗುವಂತಿಲ್ಲ."

15. ಅಂತಿಮವಾಗಿ, ಸಂವಿಧಾನದ 142ನೇ ಅನುಚ್ಛೇದದ ಅಡಿಯಲ್ಲಿ ನ್ಯಾಯಿಕ ಪರಿಶೀಲನೆಯ ಅಧಿಕಾರವನ್ನು ಚಲಾಯಿಸಿ, ಸರ್ವೋಚ್ಚ ನ್ಯಾಯಾಲಯದ ಹಸ್ತಕ್ಷೇಪವನ್ನು ಅನ್ವಯಿಸಿದಾಗ, ಅದನ್ನು 54ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಯಿತು:

> "54. .......... ಮೀಸಲಾತಿ ಪ್ರಯೋಜನವನ್ನು ಯಾರಿಗೆ ಮೀಸಲಿರಿಸಲಾಗಿದೆಯೋ ಆ ಗೊತ್ತುಪಡಿಸಿದ ಜಾತಿಗೆ, ಪಂಗಡಕ್ಕೆ ಅಥವಾ ವರ್ಗಕ್ಕೆ ಸೇರಿದ ಸುಳ್ಳು ಕ್ಲೇಮನ್ನು ಒಬ್ಬ ಅಭ್ಯರ್ಥಿಯು

ಮುಂದಿಟ್ಟಿರುವವನೆಂದು ಕಂಡುಬಂದಾಗ, ಅದು, ಆ ವ್ಯಕ್ತಿಯನ್ನು ರಕ್ಷಿಸಲು 142ನೇ ಅನುಚ್ಛೇದದ ಅಡಿಯಲ್ಲಿ ಅಧಿಕಾರವ್ಯಾಪ್ತಿಯನ್ನು ಚಲಾಯಿಸಿ ಕಾನೂನಿನ ನಿಯಮವನ್ನು ನಿರಾಕರಿಸಿದಂತಾಗುತ್ತದೆ. ಸತ್ಯವಂತಿಕೆಯನ್ನು ಸುನಿಶ್ಚಿತಪಡಿಸಿಕೊಳ್ಳುವಲ್ಲಿ ಸಾಮಾಜಿಕ ನ್ಯಾಯಸಮ್ಮತತೆ ಇದೆ. ವ್ಯವಸ್ಥೆಯ ಪಾವಿತ್ರ್ಯತೆಯನ್ನು ಸಂರಕ್ಷಿಸುವಲ್ಲಿ ಅದೊಂದೇ ವಿಧಾನವಾಗಿದೆ. ಜಾತಿ ಅಥವಾ ಪಂಗಡ ಅಥವಾ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಸೇರಿರುವುದಾಗಿ ಅಸತ್ಯವಾದ ಕ್ಲೇಮುಗಳನ್ನು ಮಾಡುವಂಥವರನ್ನು ಬೆಂಬಲಿಸಲು ಕಾನೂನು ವ್ಯವಸ್ಥೆಯನ್ನು ಮಾರ್ಗವನ್ನಾಗಿ ಕಾಣಲಾಗುವುದಿಲ್ಲ. ಸಂವಿಧಾನ ಯೋಜನೆಗೆ ಅನುಗುಣವಾಗಿ ಗೊತ್ತುಪಡಿಸಿದ ಜಾತಿಗಳಿಗೆ, ಪಂಗಡಗಳಿಗೆ ಅಥವಾ ವರ್ಗಗಳಿಗೆ ಮಾತ್ರ ಈ ಪ್ರಯೋಜನಗಳನ್ನು ಒದಗಿಸಲಾಗುತ್ತದೆ ಮತ್ತು ಅವುಗಳಿಗೆ ಸೇರಿರದವರು ಅದನ್ನು ಅತಿಕ್ರಮಿಸಲಾಗುವುದಿಲ್ಲ. ವಿಶ್ವಾಸಾರ್ಹತೆಯು ಕಾನೂನು ವ್ಯವಸ್ಥೆಯದು ಮಾತ್ರವಲ್ಲದೆ, ನ್ಯಾಯಿಕ ಪ್ರಕ್ರಿಯೆಯದ್ದು ಆಗಿದ್ದು, ರಾಜ್ಯದ ಕಾನೂನಿನ ಹೊರತಾಗಿ 142ನೇ ಅನುಚ್ಛೇದವು ಪ್ರದತ್ತಗೊಳಿಸಿದ ಸಾಂವಿಧಾನಿಕ ಅಧಿಕಾರದ ಚಲಾವಣೆಯಲ್ಲಿ ಅಂಥ ಕ್ಲೇಮುಗಳನ್ನು ರಕ್ಷಿಸಿದರೆ ಇವು ಸೊರಗುತ್ತವೆ.

16. ಆದಾಗ್ಯೂ, ***ಜಗದೀಶ್ ಬಲರಾಮ್ ಬಹಿರ*** ಮೊಕದ್ದಮೆಯಲ್ಲಿ, 58ನೇ ಕಂಡಿಕೆಯಲ್ಲಿ (ವೈಯಕ್ತಿಕ ಮೊಕದ್ದಮೆ ಸಂಖ್ಯೆ: 1), ***ಅಧ್ಯಕ್ಷರು ಮತ್ತು ವ್ಯವಸ್ಥಾಪಕರು, ಎಫ್‌ಸಿಐ*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಪ್ರತ್ಯರ್ಜಿದಾರನು ಸೇವೆಯಿಂದ ನಿವೃತ್ತನಾಗಿದ್ದನ್ನು ಮತ್ತು ಸೇವಾಂತ ಬಾಕಿಗಳ ಸಂದಾಯವನ್ನು ಸಹ ಪಡೆದ್ದನ್ನು ಮತ್ತು ಈ ವಿಶೇಷ ಸಂಗತಿಗಳಲ್ಲಿ, ಪ್ರತ್ಯರ್ಜಿದಾರನಿಂದ ವಸೂಲು ಮಾಡುವ ಆದೇಶಕ್ಕೆ ಅಸಮ್ಮತಿಸಲಾಯಿತು ಎಂಬುದನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಗಮನಿಸಿದೆ. ಅಂತಿಮವಾಗಿ ***ಮಿಲಿಂದ್*** ಮೊಕದ್ದಮೆಯಲ್ಲಿನ ನಿರ್ಣಯದ 38ನೇ

ಕಂಡಿಕೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ನೀಡಿರುವ ನಿರ್ದೇಶನಗಳು, ಸಂವಿಧಾನದ 142ನೇ ಅನುಚ್ಛೇದದ ಅಡಿಯಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ನಿಹಿತವಾದ ಅಧಿಕಾರಗಳಿಗೆ ಅನುಸಾರವಾಗಿವೆ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದೆ. ಮೀಸಲಾತಿ ಜಾತಿಗೆ ಅಥವಾ ಪಂಗಡಕ್ಕೆ ಅಥವಾ ವರ್ಗಕ್ಕೆ ಸೇರಿರುವ ವ್ಯಕ್ತಿಯ ಕ್ಲೇಮನ್ನು ಪರಿಶೀಲನಾ ಸಮಿತಿಯು ಇನ್ನೂ ಪರಿಶೀಲಿಸಬೇಕಿರುವಲ್ಲಿ, ಅಂತಿಮತೆಯನ್ನು ಜಾತಿ ಪ್ರಮಾಣಪತ್ರಕ್ಕೆ (ಅಥವಾ ಪ್ರಯೋಜನವನ್ನು ಪಡೆಯುವ ಕ್ಲೇಮಿಗೆ) ಅನ್ವಯಿಸಲಾಗುವುದಿಲ್ಲ. ಸುಳ್ಳೆಂದು ಕಂಡುಬಂದಿರುವ ಜಾತಿ ಕ್ಲೇಮಿನ ಆಧಾರದ ಮೇಲೆ ಪಡೆದ ಪ್ರಯೋಜನಗಳನ್ನು ಹಿಂಪಡೆಯುವುದು ಮತ್ತು ಅದರ ಅಸಿಂಧುತ್ವವು, ಜಾತಿ ಕ್ಲೇಮಿನ ಅಸಿಂಧುತ್ವದಿಂದ ಉಂಟಾಗುವ ಅವಶ್ಯಕ ಪರಿಣಾಮವಾಗಿದೆ ಮತ್ತು ಇಲ್ಲಿ ಪೂರ್ವಾನ್ವಯತೆಯ ಯಾವುದೇ ವಿವಾದವು ಉದ್ಭವಿಸುವುದಿಲ್ಲ. ಅಪರಾಧಿಕ ಮನಸು ಇದು, ರಾಜ್ಯದ ಸಂಬಂಧಪಟ್ಟ ಶಾಸನಗಳಲ್ಲಿ ಇರುವ ದಂಡನಾ ಉಪಬಂಧಗಳ ಘಟಕಾಂಶವಾಗಿದೆ. ಅಂಥ ದಂಡನಾ ಉಪಬಂಧಗಳು, ಅವುಗಳನ್ನು ಜಾರಿಗೊಳಿಸಿದ ದಿನಾಂಕದ ನಂತರ, ಅಪರಾಧವನ್ನು ಒಳಗೊಂಡ ಕೃತ್ಯವು ಸಂಭವಿಸಿದಂಥ ಸಂದರ್ಭಗಳಲ್ಲಿ ಅನ್ವಯವಾಗುತ್ತವೆ.

17. ಪ್ರಸ್ತುತ ಮೊಕದ್ದಮೆಯಲ್ಲಿ, ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯು, ಮೊದಲನೇ ಪ್ರತ್ಯರ್ಜಿದಾರನು 'ಕುರುಬ ಗೌಡ' ಸಮುದಾಯಕ್ಕೆ ಸೇರಿದವನಾಗಿದ್ದಾನೆಂದು ನಿರ್ಣಯಿಸಿದೆ. ಮೊದಲನೇ ಪ್ರತ್ಯರ್ಜಿದಾರನ ತಂದೆ ಶ್ರೀ ಎಮ್. ಜಯರಾಮ್ ತನ್ನ ಜಾತಿ ಪ್ರಮಾಣಪತ್ರವನ್ನು ಬಿಟ್ಟುಕೊಟ್ಟಿದ್ದಾರೆಂದು ಹಾಗೂ ದಿನಾಂಕ: 11.03.2002ರ ಸುತ್ತೋಲೆಯ ಪ್ರಯೋಜನ ಪಡೆಯಲು ಮಂಡ್ಯದ ತಹಸೀಲ್ದಾರರಿಗೆ ದಿನಾಂಕ: 23.05.2008ರಂದು ಅವರ ಮಕ್ಕಳು ಸಹ ಜಾತಿ ಪ್ರಮಾಣಪತ್ರವನ್ನು ಬಿಟ್ಟುಕೊಟ್ಟಿದ್ದಾರೆ ಎಂದು ಜಾತಿ ಪರಿಶೀಲನಾ ಸಮಿತಿಯ ಆದೇಶದಲ್ಲಿ ಕಂಡುಬರುತ್ತದೆ. ಇದು ಒಪ್ಪಿತ ಸ್ಥಿತಿಯಾಗಿರುವುದರಿಂದ, ***ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಎಫ್‌ಸಿಐ*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ

ನ್ಯಾಯಾಲಯದ ನಿರ್ಣಯದ ಹಿನ್ನಲೆಯಲ್ಲಿ, ಮೊದಲನೇ ಪ್ರತ್ಯರ್ಜಿದಾರನಿಗೆ ಸೇವೆಯಲ್ಲಿ ಮುಂದುವರಿಯಲು ಅನುಮತಿಸಲಾಗುವುದಿಲ್ಲ.

18. ಮೇಲೆ ಹೇಳಿದ ಕಾರಣಗಳಿಗಾಗಿ, ರಿಟ್ ಅಪೀಲುಗಳಿಗೆ ***ಅನುಮತಿ ನೀಡಲಾಗಿದ್ದು,*** ಕ್ರಮವಾಗಿ ರಿಟ್ ಅರ್ಜಿ ಸಂಖ್ಯೆ: 29850/2014ರಲ್ಲಿ ಮತ್ತು ರಿಟ್ ಅರ್ಜಿ ಸಂಖ್ಯೆ: 6383/2014ರಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ದಿನಾಂಕ: 06.09.2016ರ ಮತ್ತು ದಿನಾಂಕ: 18.08.2016ರ ಪ್ರಶ್ನಿತ ಆದೇಶಗಳನ್ನು ತಳ್ಳಿಹಾಕಲಾಗಿದೆ.

---